# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 2524 |
| ಸದಸ್ಯರ ಹೆಸರು | : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 23.03.2022 |
| ಉತ್ತರಿಸುವ ಸಚಿವರು | : ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ನರಸಾಪುರ ಗ್ರಾಮದ ಸರ್ವೇ ನಂ.56 ರಲ್ಲಿ ಜಿ.ಟಿ.ಬಿ ಕ್ರಷರ್ಸ್ ಇವರಿಗೆ ಸರ್ಕಾರದಿಂದ ಮಂಜೂರಾದ ಜಮೀನಿನ ವಿಸ್ತೀರ್ಣವೆಷ್ಟು; | ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಅಂಬಾಜಿದುರ್ಗ ಹೋಬಳಿ, ನರಸಾಪುರ ಗ್ರಾಮದ ಸ.ನಂ.01 ರಲ್ಲಿ 1-00 ಎಕರೆ (ಸ.ನಂ.01 ದುರಸ್ತಿಯಾಗಿ ಹೊಸ ಸ.ನಂ.56 ಆಗಿರುತ್ತದೆ.) ಸರ್ಕಾರಿ ಜಮೀನು ಶ್ರೀ ಪಾತೂರು ವೆಂಕಟರವಣಪ್ಪ ಎಂಬುವರಿಗೆ ತಹಸೀಲ್ದಾರ್ ರವರ ಕ್ರಮಾಂಕ: ಆರ್.ಯು.ಸಿ.ಎಲ್.ಎನ್.ಡಿ/ 14/1977-7 ದಿನಾಂಕ: 15/10/1977 ರಂದು ಅಧಿಕೃತ ಜ್ಞಾಪನ ಹೊರಡಿಸಿ, ದಿನಾಂಕ:21/10/1978 ರಂದು ಕೆಲವೊಂದು ಷರತ್ತುಗಳನ್ನು ವಿಧಿಸಿ ಸಾಗುವಳಿ ಚೀಟಿಯನ್ನು ನೀಡಲಾಗಿರುತ್ತದೆ.<br><br>ಪ್ರಸ್ತಾಪಿತ ಸ.ನಂ.01 ದುರಸ್ತಿಯಾಗಿ ಹೊಸ ಸ.ನಂ.56 ಎಂ.ಆರ್.219-5/1990-91ರಂತೆ ಖಾತೆ ಆಗಿರುತ್ತದೆ. ಸದರಿ ಮೂಲ ಮಂಜೂರಿದಾರರ ಪೌತಿ ನಂತರ ಅವರ ಹೆಂಡತಿಯಾದ ಶ್ರೀಮತಿ ಗಂಗಮ್ಮ ಕೋಂ ಲೇಟ್ ಪಾತೂರು ವೆಂಕಟರವಣಪ್ಪ ರವರಿಗೆ ಎಂ.ಆರ್.08/2006-07 ದಿನಾಂಕ:19/02/2007 ರಂದು ಖಾತೆಯಾಗಿ ತದನಂತರ ಸದರಿ ಜಮೀನನ್ನು ಶ್ರೀ ಜಿ.ವಿ ಕೃಷ್ಣಪ್ಪ ರವರಿಗೆ ಕ್ರಯವಾಗಿ ಎಂ.ಆರ್.12/2006-07 ರಂತೆ ಕ್ರಯದಂತೆ ಖಾತೆ ದಾಖಲಾಗಿರುತ್ತದೆ.<br><br>ಸದರಿ ಜಮೀನನ್ನು ಶ್ರೀ ಜಿ.ವಿ ಕೃಷ್ಣಪ್ಪ ರವರಿಗೆ ಜಿಲ್ಲಾಧಿಕಾರಿ ಕಚೇರಿ ಅಧಿಕೃತ ಜ್ಞಾಪನ ಸಂಖ್ಯೆ: ಎ.ಎಲ್.ಎನ್/ ಎಸ್.ಆರ್/59/2007-08 ದಿನಾಂಕ: 16/08/2008 ರಂದು ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿ, ಕೋಟಗಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನರಸಾಪುರ ಗ್ರಾಮಕ್ಕೆ ಸೇರಿದ ಪಂಚಾಯಿತಿ ಖಾತೆ ಸಂಖ್ಯೆ:83/89 ಎಂದು ಖಾತೆ ದಾಖಲಾಗಿರುತ್ತದೆ. ಸದರಿ ಜಮೀನನ್ನು ಶ್ರೀಮತಿ ಹೆಚ್.ಕೆ.ಸಾವಿತ್ರಿ ಕೋಂ ಹೆಚ್.ಟಿ.ತ್ಯಾಗರಾಜ್ ರವರಿಗೆ ದಸ್ತಾವೇಜು ಸಂಖ್ಯೆ:1525/2011-12 ದಿನಾಂಕ:04/08/2011 ರಂದು ಕ್ರಯವಾಗಿರುತ್ತದೆ.<br><br>ತದನಂತರ ಶ್ರೀಮತಿ ಹೆಚ್.ಕೆ.ಸಾವಿತ್ರಿ ಕೋಂ ಹೆಚ್.ಟಿ. ತ್ಯಾಗರಾಜ್‌ರವರ ಮಾಲೀಕತ್ವದ ಮೆ॥ಜಿ.ಟಿ.ಬಿ.ಸ್ಟೋನ್ ಕ್ರಷರ್ ರವರ ವತಿಯಿಂದ ಸದರಿ ಜಮೀನಿಗೆ ಸಂಬಂಧಿಸಿದ ಇಲಾಖೆಗಳಾದ |

| | | |
|---|---|---|
| | | ಕಂದಾಯ, ಅರಣ್ಯ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಅಧಿಕಾರಿಗಳು ಜಂಟಿಯಾಗಿ ಬೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಿ, ಕರ್ನಾಟಕ ಕಲ್ಲುಪುಡಿ ಘಟಕಗಳ ಅಧಿನಿಯಮ 2011 ರ ನಿಯಮ 6(3)ರ ಎಲ್ಲಾ ಷರತ್ತುಗಳು ಪಾಲನೆಯಾಗುತ್ತಿರುವುದರಿಂದ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಹಾಗೂ ನಿಯಂತ್ರಣ ಪ್ರಾಧಿಕಾರದಿಂದ ದಿನಾಂಕ:01/07/2017 ರಿಂದ ಜಾರಿಗೆ ಬರುವಂತೆ 20 ವರ್ಷಗಳ ಅವಧಿಗೆ ನಿಯಮಾನುಸಾರ ನಮೂನೆ-ಸಿಯನ್ನು ಪಡೆದುಕೊಂಡಿರುತ್ತಾರೆ. |
| ಆ) | ಸದರಿಯವರು ಸರ್ಕಾರ ಮಂಜೂರು ಮಾಡಿದ್ದಕ್ಕಿಂತ ಹೆಚ್ಚಿಗೆ ಸ್ಥಳೀಯ ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಜಮೀನನ್ನು ಒತ್ತುವರಿ ಮಾಡಿಕೊಂಡು ಭೂ ಪರಿವರ್ತನೆ ಮಾಡಿಸಿಕೊಳ್ಳದೆ ವಾಣಿಜ್ಯ ಚಟುವಟಿಕೆಯಲ್ಲಿ ತೊಡಗಿಕೊಂಡು ಕಾನೂನು ಬಾಹಿರವಾಗಿ ಅನಧಿಕೃತವಾಗಿ ಶೆಡ್ ಹಾಗೂ ಬೇಲಿಯನ್ನು ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ತಹಶೀಲ್ದಾರ್, ಚಿಂತಾಮಣಿ ತಾಲ್ಲೂಕು ಇವರ ದಿನಾಂಕ:18/03/2022 ರಂದು ಸ್ಥಳ ತನಿಖೆ ಮಾಡಿ ನರಸಾಪುರ ಗ್ರಾಮದ ಸ.ನಂ.56 ರಲ್ಲಿ 1-00 ಎಕರೆ ಪ್ರದೇಶದಲ್ಲಿ ಕ್ರಷರ್ ಘಟಕ ಸ್ಥಾಪನೆ ಮಾಡಿರುವುದಾಗಿ, ಸದರಿ ಪ್ರದೇಶದ ಉತ್ತರಕ್ಕೆ ಸ.ನಂ.01ರ ಪೈಕಿ 1-00 ಎಕರೆ ಪ್ರದೇಶ ಶ್ರೀ ದಸ್ತಗಿರಿ ಸಾಬ್ (ಹಾಲಿ ಪಹಣಿ ಮಲ್ಲಿಕಾಬಿ) ರವರಿಂದ ಮತ್ತು ಪಶ್ಚಿಮಕ್ಕೆ 2-23 ಎಕರೆ/ಗುಂಟೆ ಜಮೀನು ಶ್ರೀ ಎಚ್.ಇಸ್ಮಾಯಿಲ್ ರವರುಗಳಿಂದ ಸ.ನಂ.56ರ ಮಾಲೀಕರಾದ ಹೆಚ್.ಕೆ.ಸಾವಿತ್ರಿ ಮತ್ತು ಅವರ ಗಂಡ ತ್ಯಾಗರಾಜ್ ರವರು ಜಿ.ಪಿ.ಎ ಪಡೆದಿರುತ್ತಾರೆ. ಪೂರ್ವಕ್ಕೆ ಸದರಿಯವರ ಕುಟುಂಬಸ್ಥರಾದ ಶ್ರೀಮತಿ ಎಚ್.ಟಿ. ರೂಪಶ್ರೀ ರವರ ಹೆಸರಿನಲ್ಲಿ ಸ.ನಂ.55ರ 1-20 ಎಕರೆ/ಗುಂಟೆ ಜಮೀನಿರುತ್ತದೆ. ಸ.ನಂ.56ರಲ್ಲಿ 1-00 ಎಕರೆ, ಸ.ನಂ.55ರಲ್ಲಿ 1-20 ಎಕರೆ/ಗುಂಟೆ ಮತ್ತು ಸ.ನಂ.1ರ ಪೈಕಿ 1-00 ಎಕರೆ ಒಟ್ಟು 3-20 ಎಕರೆ/ಗುಂಟೆ ಜಮೀನಿನ ಸುತ್ತಲೂ ಕಾಂಪೌಂಡ್ ನಿರ್ಮಿಸಿರುತ್ತಾರೆ.<br><br>ಮುಂದುವರೆದು, ಸ.ನಂ.55ರಲ್ಲಿ 1-20 ಎಕರೆ/ಗುಂಟೆ ಪ್ರದೇಶದಲ್ಲಿನ ಪೈಕಿ 23*75 ಅಡಿಗಳ ವಿಸ್ತೀರ್ಣದಲ್ಲಿ ವಾಸದ ಉದ್ದೇಶಕ್ಕಾಗಿ ಶೆಡ್ ನಿರ್ಮಿಸಿರುತ್ತಾರೆ. ಆದರೆ, ಸದರಿ ಸರ್ವೆ ನಂಬರ್ ಭೂಪರಿವರ್ತನೆ ಆಗದೆ ಇರುವುದರಿಂದ. ಸದರಿ ಮಾಲೀಕರಾದ ಶ್ರೀಮತಿ ಎಚ್.ಟಿ. ರೂಪಶ್ರೀ ಬಿನ್ ಹೆಚ್.ಜಿ.ತ್ಯಾಗ್‌ರಾಜ್ ರವರಿಗೆ ದಿನಾಂಕ:18.03.2022 ರಂದು ತಹಶೀಲ್ದಾರ್, ಚಿಂತಾಮಣಿ ತಾಲ್ಲೂಕು ರವರು ನೋಟೀಸ್ ನೀಡಿರುತ್ತಾರೆ. |
| ಇ) | ಹಾಗಿದ್ದಲ್ಲಿ ಎಷ್ಟು ಎಕರೆ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ; | ನರಸಾಪುರ ಗ್ರಾಮದ ಸ.ನಂ.55 ರಲ್ಲಿ 1-20 ಎಕರೆ/ಗುಂಟೆ ಜಮೀನಿನ ಹಿಡುವಳಿ ಪ್ರದೇಶದಲ್ಲಿ 23*75 ಅಡಿಗಳ ವಿಸ್ತೀರ್ಣದಲ್ಲಿ ವಾಸದ ಉದ್ದೇಶಕ್ಕಾಗಿ ಶೇಡ್ ನಿರ್ಮಿಸಲಾಗಿರುತ್ತದೆ. ಹಾಗೂ ಸರ್ಕಾರಿ ಜಮೀನು ಯಾವುದೇ ಒತ್ತುವರಿ ಇರುವುದಿಲ್ಲ. |

| | | |
|---|---|---|
| ಈ) | ಈ ಸಂಬಂಧ ಕಂದಾಯ ಅಧಿಕಾರಿಗಳು ಪದೇ ಪದೇ ಸರ್ಕಾರಕ್ಕೆ ತಪ್ಪು ಮಾಹಿತಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸದರಿ ವಿಷಯದ ಬಗ್ಗೆ ಗ್ರಾಮಲೆಕ್ಕಿಗರು, ರಾಜಸ್ವ ನಿರೀಕ್ಷಕರು ಮತ್ತು ಭೂ ಮಾಪಕರೊಂದಿಗೆ ತಹಶೀಲ್ದಾರ್ ರವರು ಜಂಟಿ ಸ್ಥಳ ತನಿಖೆ ಮಾಡಿ ಸ.ನಂ.55 ರಲ್ಲಿ 1-20 ಎಕರೆ/ಗುಂಟೆ ಜಮೀನಿನ ಹಿಡುವಳಿ ಪ್ರದೇಶದ ಪೈಕಿ 23*75 ಅಡಿಗಳ ವಿಸ್ತೀರ್ಣದಲ್ಲಿ ವಾಸದ ಉದ್ದೇಶಕ್ಕಾಗಿ ಶೆಡ್ ನಿರ್ಮಿಸುತ್ತಿದ್ದು ಈ ಬಗ್ಗೆ ಸದರಿ ಮಾಲೀಕರಿಗೆ ನೋಟೀಸ್ ನೀಡಲಾಗಿರುತ್ತದೆ. |
| ಉ) | ಈ ಸಂಬಂಧ ತಪ್ಪಿತಸ್ಥ ಅಧಿಕಾರಿ/ನೌಕರರ ಹಾಗೂ ಕ್ರಷರ್ ಮಾಲೀಕರ ವಿರುದ್ಧ ತೆಗೆದುಕೊಂಡ ಕಾನೂನು ಕ್ರಮಗಳೇನು? | ಚಿಂತಾಮಣಿ ತಾಲ್ಲೂಕು, ಅಂಬಾಜಿದುರ್ಗ ಹೋಬಳಿ, ನರಸಾಪುರ ಗ್ರಾಮ ಸ.ನಂ.55 ರಲ್ಲಿ 1-20 ಎಕರೆ/ಗುಂಟೆ ಶ್ರೀಮತಿ ಹೆಚ್.ಟಿ. ರೂಪಶ್ರೀ ಬಿನ್ ತ್ಯಾಗರಾಜ್ ರವರ ಹಿಡುವಳಿ ಜಮೀನಿನ ಪೈಕಿ 23*75 ಅಡಿಗಳ ವಿಸ್ತೀರ್ಣದಲ್ಲಿ ಅನಧಿಕೃತವಾಗಿ ಶೆಡ್ಡಗಳನ್ನು ನಿರ್ಮಾಣ ಮಾಡುತ್ತಿರುವ ಪ್ರಯುಕ್ತ ಈಗಾಗಲೇ ತಹಸೀಲ್ದಾರ್ ಚಿಂತಾಮಣಿ ತಾಲ್ಲೂಕು ರವರು ನೋಟೀಸ್ ನೀಡಿರುತ್ತಾರೆ. ನಂತರ ಸದರಿ ಜಮೀನನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 96 ಮತ್ತು ಕರ್ನಾಟಕ ಭೂ ಕಂದಾಯ ನಿಯಮಗಳು 1966 ರ ನಿಯಮ 107ಎ ಮತ್ತು 107-ಎಎ ರಡಿಯಲ್ಲಿ ನಿಯಮಾನುಸಾರ ಕ್ರಮವಹಿಸಲಾಗುತ್ತದೆ. |

ಸಂಖ್ಯೆ : ಆರ್‌ಡಿ 140 ಎಲ್‌ಜಿಕ್ಯೂ 2022

(ಆರ್.ಅಶೋಕ)
ಕಂದಾಯ ಸಚಿವರು